ದಿನಾಂಕಃ **21.04.2026**

ಸಾಕ್ಷಿಗೆ ಪ್ರಮಾಣ ವಚನ ಭೋದಿಸಲಾಯಿತು.

ಮುಂದುವರೆದ ಪಾಟೀ ಸವಾಲುಃ ವಾದಿ ಪರ ಶ್ರೀ ಮತಿ ವಿ.ಕೆ.ಎಸ್. ವಕೀಲರಿಂದಃ

ಸರ್ವೆ.ನಂಬರ್.71 ರಲ್ಲಿ ನಾನು ಸಾಗುವಳಿ ಮಾಡುತ್ತಿರುವ ಸ್ವತ್ತಿನ ದಕ್ಷಿಣ ದಿಕ್ಕಿನಲ್ಲಿರುವ ಸರ್ವೆ.ನಂಬರ್.71 ರಲ್ಲಿ ನಾಗರಾಜು ಸ್ವಾಧೀನದಲ್ಲಿ ಇರುತ್ತಾರೆ. ನಾಗರಾಜು ಎಷ್ಟು ವರ್ಷಗಳಿಂದ ಸದರಿ ಸ್ವತ್ತಿನ ಸಾಗುವಳಿ ಮಾಡುತ್ತಿರುತ್ತಾರೆ ಎಂದು ನನಗೆ ಗೊತ್ತಿರುವುದಿಲ್ಲ. ನಾಗರಾಜುರವರ ಸ್ವಾಧೀನದಲ್ಲಿ ಇರುವ ಜಮೀನಿನ ಪೂರ್ವಕ್ಕೆ ನಮ್ಮ ಪಿತ್ರಾರ್ಜಿತ ಆಸ್ತಿ ಇರುತ್ತದೆ ಎಂದು ಸೂಚಿಸುವುದು ಸರಿಯಲ್ಲ. ನಾಗರಾಜು ಸ್ವಾಧೀನದಲ್ಲಿ ಇರುವ ಜಮೀನಿನ ಅಕ್ಕ ಪಕ್ಕದಲ್ಲಿ ನನಗೆ ಯಾವುದೇ ಪಿತ್ರಾರ್ಜಿತ ಜಮೀನು ಇರುವುದಿಲ್ಲ. ನಾಗರಾಜು ಸ್ವಾಧೀನದಲ್ಲಿ ಇರುವ ಸ್ವತ್ತಿನಲ್ಲಿ ಮೊದಲು ರಾಮಕೃಷ್ಣರಾವ್ ಸಾಗುವಳಿ ಮಾಡುತ್ತಿದ್ದರು ಎಂದರೆ ನನಗೆ ಗೊತ್ತಿರುವುದಿಲ್ಲ. 1942-43 ರಿಂದ ರಾಮಕೃಷ್ಣರಾವ್ ಸದರಿ 4 ಎಕರೆ ಜಮೀನನ್ನು ಸಾಗುವಳಿ ಮಾಡುತ್ತಿರುತ್ತಾರೆ ಎಂದರೆ ನನಗೆ ಗೊತ್ತಿರುವುದಿಲ್ಲ. ರಾಮಕೃಷ್ಣರಾವ್ ತೀರಿಕೊಂಡ ನಂತರ ಅವರ ಹೆಂಡತಿ ನಂಜಮ್ಮ ಸದರಿ 4 ಎಕರೆಯ ಸ್ವಾಧೀನದಲ್ಲಿ ಇರುತ್ತಾರೆ ಎಂದರೆ ನನಗೆ ಗೊತ್ತಿರುವುದಿಲ್ಲ. 1995 ರಲ್ಲಿ ನಂಜಮ್ಮರವರಿಂದ 1 ನೇ ವಾದಿಯ ತಂದೆ 2 ಎಕರೆ 26 ಗುಂಟೆ ಜಮೀನನ್ನು ಖರೀದಿ ಮಾಡಿರುತ್ತಾರೆ ಎಂದರೆ ನನಗೆ ಗೊತ್ತಿರುವುದಿಲ್ಲ. ಉಳಿದ 1 ಎಕರೆ 14 ಗುಂಟೆ ಜಮೀನನ್ನು ನಮ್ಮ ಗ್ರಾಮದ ನರಸಿಂಹಮೂರ್ತಿರವರು ಖರೀದಿ ಮಾಡಿರುತ್ತಾರೆ ಎಂದರೆ ನನಗೆ ಗೊತ್ತಿರುವುದಿಲ್ಲ. ಖರೀದಿದಾರರು ಅವರು ಖರೀದಿ ಮಾಡಿದ ಸ್ವತ್ತಿನಲ್ಲಿ ಸ್ವಾಧೀನದಲ್ಲಿ ಇರುತ್ತಾರೆ ಎಂದು ಸೂಚಿಸಿದ್ದಕ್ಕೆ ಸಾಕ್ಷಿ ನಾಗರಾಜುರವರು ಇರುತ್ತಾರೆ ಉಳಿದವರ ಬಗ್ಗೆ ನನಗೆ ಗೊತ್ತಿರುವುದಿಲ್ಲ ಎಂದು ಉತ್ತರಿಸುತ್ತಾರೆ.

2. ನಿಡಿ-4 ರಂತೆ ನೋಟಿಸ್ಸು ನೀಡಿದ ನಂತರ ಸದರಿ 4 ಎಕರೆ ಖಾತೆ ನಂಜಮ್ಮರವರ ಹೆಸರಿಗೆ ನಂತರ ಖರೀದಿದಾರರ ಹೆಸರಿಗೆ ಖಾತೆ ವರ್ಗಾವಣೆಯಾಗಿರುತ್ತದೆ ಎಂದರೆ ನನಗೆ ಗೊತ್ತಿರುವುದಿಲ್ಲ. ನಿಡಿ-4 ಕ್ಕೆ ಸಂಬಂಧಿಸಿದಂತೆ ಉಪವಿಭಾಗಾಧಿಕಾರಿಗಳ ಕಛೇರಿಯಲ್ಲಿ ಪ್ರಕರಣ ಸಂಖ್ಯೆ ಆರ್.ಆರ್.ಟಿ(ಎಂ)ಪಿಕೆಐಸಿಆರ್.1354/2011-12 ರಂತೆ 1992 ರಿಂದ 2011-12 ರವರೆಗೆ ಪ್ರಕರಣ ನಡೆದಿರುತ್ತದೆ ಎಂದರೆ ನನಗೆ ಗೊತ್ತಿರುವುದಿಲ್ಲ. ಸದರಿ ಪ್ರಕರಣದಲ್ಲಿ ಲಕ್ಷ್ಮಮ್ಮ ಮತ್ತು ಲಕ್ಷ್ಮಮ್ಮನ ಮಕ್ಕಳು ಪಕ್ಷಗಾರರಾಗಿ ಸೇರಿಕೊಂಡಿರುವುದಿಲ್ಲ.

3. ನಾಗರಾಜುರವರ ಸ್ವಾಧೀನದಲ್ಲಿ ಇರುವ ಜಮೀನು ಕೆರೆಯ ಅಂಗಳದಿಂದ 1.1/2 ಅಡಿ ಎತ್ತರದಲ್ಲಿ ಇರುತ್ತದೆ ಎಂದು ಸೂಚಿಸುವುದು ಸರಿಯಲ್ಲ. ಲಕ್ಷ್ಮಮ್ಮರವರು ಸಾಗುವಳಿ ಮಾಡುತ್ತಿದ್ದ ಜಮೀನು ಕೆರೆ ಮುಳುಗಡೆ ಪ್ರದೇಶ ಆಗಿರುವುದರಿಂದ ಅವರ ಹೆಸರಿಗೆ ಖಾತೆ ಆಗಿರುವುದಿಲ್ಲ ಎಂದು ಸೂಚಿಸುವುದು ಸರಿಯಲ್ಲ. ಸಾಕ್ಷಿ ಮುಂದುವರೆದ ಲಕ್ಷ್ಮಮ್ಮನ ಹೆಸರಿಗೆ ಪಹಣಿ ಇರುತ್ತದೆ ಎಂದು ಉತ್ತರಿಸುತ್ತಾರೆ. ಲಕ್ಷ್ಮಮ್ಮನ ಹೆಸರಿನಲ್ಲಿರುವ ಸರ್ವೆ.ನಂಬರ್.71 ಕ್ಕೆ ಸಂಬಂಧಿಸಿದ ಪಹಣಿಯನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿರುತ್ತೇನೆ. ಸರ್ವೆ.ನಂಬರ್.71 ರಲ್ಲಿ ಉಪವಿಭಾಗಾಧಿಕಾರಿಗಳು ಲಕ್ಷ್ಮಮ್ಮ ಮತ್ತು ಅವರ ಕುಟುಂಬದ ಸದಸ್ಯರಿಗೆ ಜಮೀನು ಮಂಜೂರಾಗಿರುತ್ತದೆ ಎಂದು ಯಾವುದೇ ಆದೇಶ ಮಾಡಿರುವುದಿಲ್ಲ ಎಂದರೆ ನನಗೆ ಗೊತ್ತಿರುವುದಿಲ್ಲ.

4. ದಾವಾ ಸ್ವತ್ತನ್ನು ಅಕ್ರಮವಾಗಿ ಪಡೆದುಕೊಳ್ಳುವ ಉದ್ದೇಶದಿಂದ ಈ ದಾವೆಯನ್ನು ಹೂಡುವ ಪೂರ್ವದಲ್ಲಿ ನಮ್ಮ ಸ್ವಾಧೀನದಲ್ಲಿ ಇರುವ ಸ್ವತ್ತಿನ ದಕ್ಷಿಣ ದಿಕ್ಕಿನಲ್ಲಿರುವ ವಾದಿಗಳಿಗೆ ಸೇರಿದ ಬದುವಿನ ಮೇಲೆ ಇದ್ದಂತಹ ಮರಗಳನ್ನು ನಾವು ಕಡಿದು ವಾದಿಗೆ ಸೇರಿದ

ಜಮೀನನ್ನು ಒತ್ತುವರಿ ಮಾಡಲು ಪ್ರಯತ್ನಿಸಿರುತ್ತೇವೆ ಎಂದರೆ ಸರಿಯಲ್ಲ. ದಾವಾ ಸ್ವತ್ತಿನ ಪೂರ್ವ ದಿಕ್ಕಿನಿಂದ ಮತ್ತು ಉತ್ತರ ದಿಕ್ಕಿನಿಂದ ನಾವು ದಾವಾ ಸ್ವತ್ತನ್ನು ಒತ್ತುವರಿ ಮಾಡಲು ಪ್ರಯತ್ನಿಸಿರುತ್ತೇವೆ ಎಂದು ಸೂಚಿಸುವುದು ಸರಿಯಲ್ಲ. ವಾದಿಗಳ ಸ್ವಾಧೀನದಲ್ಲಿ ಇರುವ ಸ್ವತ್ತಿನಲ್ಲಿ ನಮಗೆ ಯಾವುದೇ ಹಕ್ಕು ಅಥವಾ ಸ್ವಾಧೀನ ಇಲ್ಲದಿದ್ದರು ಸಹ ವಾದಿಗಳಿಗೆ ವಿನಾಕರಣ ತೊಂದರೆ ಕೊಡುತ್ತಿರುತ್ತೇವೆ ಎಂದು ಸೂಚಿಸುವುದು ಸರಿಯಲ್ಲ.

5. ಸರ್ವೆ.ನಂಬರ್.71 ರಲ್ಲಿ ಲಕ್ಷ್ಮಮ್ಮನ ಮಕ್ಕಳಿಗೆ ಜಮೀನು ಇರುವುದಿಲ್ಲ ಎಂದು ಗೊತ್ತಾಗಿರುವುದರಿಂದ ಅವರು ದಾವೆಯಲ್ಲಿ ಹಾಜರಾಗಿರುವುದಿಲ್ಲ ಎಂದು ಪ್ರಶ್ನಿಸಿದ್ದಕ್ಕೆ ಸಾಕ್ಷಿ ಅವರು ಜಮೀನನ್ನು ಮಾರಾಟ ಮಾಡಿರುತ್ತಾರೆ ಆದ್ದರಿಂದ ಅವರು ಬಂದಿರುವುದಿಲ್ಲ ಎಂದು ಉತ್ತರಿಸುತ್ತಾರೆ.

ಮರುವಿಚಾರಣೆ ಇಲ್ಲ.

(ತೆರೆದ ನ್ಯಾಯಾಲಯಾದಲ್ಲಿ ಸಾಕ್ಷಿಯ ಹೇಳಿಕೆಯಂತೆ ಗಣಕೀರಣಗೊಳಿಸಿ ಪ್ರಿಂಟ್ ತೆಗೆಯಲಾಯಿತು.)

ಓ. ಹೇ. ಕೇ. ಸರಿ. ಇದೆ.

ಸಹಿ/-

(ಶ್ರೀ ಅಮರನಾಥ ಬಿ.ಎನ್)
ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು
ಜೆ.ಎಂ.ಎಫ್.ಸಿ. ಮಧುಗಿರಿ